# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

("ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)

'ಜ್ಞಾನ ಸಂಗಮ', ಬೆಳಗಾವಿ - ೫೯೦ ೦೧೮ ಕರ್ನಾಟಕ ರಾಜ್ಯ

# Visvesvaraya Technological University

*(State University of Government of Karnataka Established as per the VTU Act,1994)*

**"Jnana Sangama", Belagavi-590 018, Karnataka State, India**

ಪ್ರೊ. ಎ. ಎಸ್. ದೇಶಪಾಂಡೆ ಬಿ.ಇ., ಎಂ.ಟೆಕ್., ಪಿಹೆಚ್.ಡಿ.
ಕುಲಸಚಿವರು

ದೂರವಾಣಿ: (೦೮೩೧)೨೪೯೮೧೦೦
ಫ್ಯಾಕ್ಸ್ : (೦೮೩೧)೨೪೦೫೪೬೭


ಉಲ್ಲೇಖ ಸಂ: ವಿತಾವಿ/ಬಿಜಿಎಂ/ಶೈಕ್ಷಣಿಕ/ಎ-೧೧/೨೦೨೦-೨೧/6280 ದಿನಾಂಕ : 12 MAR 2022

**ಸುತ್ತೋಲೆ**

ವಿಷಯ: "ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆ" ಶಿಷ್ಯವೇತನ ಕಾರ್ಯಕ್ರಮ ಹಾಗೂ SC/ST/OBC/ Minority ಶಿಷ್ಯವೇತನ ಅನುಷ್ಠಾನ ಕುರಿತು.

ಉಲ್ಲೇಖ: ವಿತಾವಿ/ಬಿಜಿಎಂ/ಶೈಕ್ಷಣಿಕ/ಎ-೧೧/೨೦೨೦-೨೧/೪೬೦೮ ದಿನಾಂಕ: ೨೩-೧೨-೨೦೨೧

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರೈತರ ಮಕ್ಕಳ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಲು ಹೊಸ ಶಿಷ್ಯವೇತನ ಯೋಜನೆಯಾದ ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆಯನ್ನು ಸದುಪಯೋಗಪಡಿಸಿಕೊಂಡು ಅರ್ಹ ವಿದ್ಯಾರ್ಥಿಗಳು SSP portal ನಲ್ಲಿ ನೋಂದಾಯಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಅದೇ ರೀತಿ SC/ST/OBC/Minority ವಿದ್ಯಾರ್ಥಿಗಳು SSP portal ನಲ್ಲಿ ಶಿಷ್ಯವೇತನಕ್ಕೆ ನೋಂದಾಯಿಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಈ ಕೆಳಗಿನ ನಮೂನೆಯಲ್ಲಿ ಪ್ರಸಕ್ತ ೨೦೨೧-೨೨ ನೇ ಸಾಲಿನಲ್ಲಿ ತಮ್ಮ ಕಾಲೇಜಿನ ವಿದ್ಯಾರ್ಥಿಗಳು ಶಿಷ್ಯವೇತನಕ್ಕಾಗಿ ನೋಂದಾಯಿಸಿದ ವಿವರಗಳನ್ನು ಭರ್ತಿ ಮಾಡಿ ಕಳುಹಿಸಲು ಕೋರಲಾಗಿದೆ. Email id (stats@vtu.ac.in) in Excell Sheet).

**ನಮೂನೆ**

| ಕ್ರ. ಸಂ. | ಕಾಲೇಜು | ಶೈಕ್ಷಣಿಕ ಪದವಿ/ ಕೋರ್ಸ್ | ಸೆಮಿಸ್ಟರ್/ ವರ್ಷ | ಪ್ರವೇಶ ಪಡೆದಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಪೈಕಿ ರೈತ ಕುಟುಂಬಕ್ಕೆ ಸೇರಿದ ವಿದ್ಯಾರ್ಥಿಗಳ ಸಂಖ್ಯೆ | ಮುಖ್ಯಮಂತ್ರಿ ರೈತ ವಿದ್ಯಾನಿಧಿ ಶಿಷ್ಯವೇತನಕ್ಕಾಗಿ SSP portal ನಲ್ಲಿ ನೊಂದಾಯಿಸಿದ ವಿದ್ಯಾರ್ಥಿಗಳ ಸಂಖ್ಯೆ | ಇತರೆ ಶಿಷ್ಯವೇತನಕ್ಕೆ (SC/ST/OBC/ Minority) SSP portal ನಲ್ಲಿ ನೊಂದಾಯಿಸಿದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|---|---|
| | | | | | | | |

ಮುಂದುವರೆದು, ಕಾಲೇಜು ಪ್ರಾಂಶುಪಾಲರು ತಮ್ಮ ಕಾಲೇಜು ವಿದ್ಯಾರ್ಥಿಗಳು SSP portal ನಲ್ಲಿ "ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆ" ಶಿಷ್ಯವೇತನಕ್ಕೆ ಅರ್ಹರಾದ ಎಲ್ಲ ರೈತ ಮಕ್ಕಳು ಹಾಗೂ ಅರ್ಹ SC/ST/OBC/Minority ವಿದ್ಯಾರ್ಥಿಗಳು ನೋಂದಾಯಿಸಲ್ಪಟ್ಟಿದ್ದಾರೆಂದು ದೃಢೀಕರಣ ಪತ್ರ ಸಲ್ಲಿಸಬೇಕು. ಹಾಗೂ ತಮ್ಮ ಕಾಲೇಜಿನ ಯಾವುದೇ ವಿದ್ಯಾರ್ಥಿಯು SSP portal ನಲ್ಲಿ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಲು ಯಾವುದೇ ಕಾರಣಗಳಿಂದ ವಂಚಿತರಾಗಿದ್ದಲ್ಲಿ ಆಯಾ ಕಾಲೇಜು ಪ್ರಾಂಶುಪಾಲರೇ ಜವಾಬ್ದಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಲಾಗಿರುತ್ತದೆ.

ತಮ್ಮ ವಿಶ್ವಾಸಿ,

12/3/22

ಕುಲಸಚಿವರು

ಗೆ,

೧. ಪ್ರಾಂಶುಪಾಲರು, (ಘಟಕ/ಸ್ವಾಯತ್ತ/ಸಂಯೋಜಿತ), ಕಾಲೇಜುಗಳು, ವಿತಾವಿ ಬೆಂಗಳೂರು, ಬೆಳಗಾವಿ, ಕಲಬುರಗಿ ಮತ್ತು ಮೈಸೂರು ವಿಭಾಗ.

೨. ಸ್ನಾತಕೋತ್ತರ ಎಲ್ಲ ವಿಭಾಗಗಳ ಅಧ್ಯಕ್ಷರುಗಳು/ಸಂಯೋಜಕರು ವಿತಾವಿ ಸ್ನಾತಕೋತ್ತರ ವಿಭಾಗ, ಮುದ್ದೇನಹಳ್ಳಿ, ಬೆಳಗಾವಿ, ಕಲಬುರಗಿ ಮತ್ತು ಮೈಸೂರು.

ಪ್ರತಿ: ಲೈಜನ್ ಆಫೀಸರ್, ಅನುಸೂಚಿತ ಜಾತಿ/ಅನುಸೂಚಿತ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಘಟಕ, ವಿ.ತಾ.ವಿ. ಬೆಳಗಾವಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.